**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 699 |
| ಸದಸ್ಯರ ಹೆಸರು | : | ಶ್ರೀ ಗೋವಿಂದ ರಾಜು |
| ಉತ್ತರಿಸುವ ದಿನಾಂಕ | : | 22/02/2022 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು. |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿರುವ ಒಟ್ಟು ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳ ಸಂಖ್ಯೆಯೆಷ್ಟು; | ರಾಜ್ಯದಲ್ಲಿ 61 ನಗರಸಭೆ, 123 ಪುರಸಭೆ ಮತ್ತು 117 ಪಟ್ಟಣ ಪಂಚಾಯಿತಿಗಳು ಸೇರಿದಂತೆ ಒಟ್ಟು 301 ನಗರ ಸ್ಥಳೀಯ ಸಂಸ್ಥೆಗಳಿರುತ್ತವೆ. ಇದರಲ್ಲಿ ಕೋನಪ್ಪನ ಅಗ್ರಹಾರ ಮತ್ತು ದೊಡ್ಡತೋಗೂರು ಗ್ರಾಮ ಪಂಚಾಯಿತಿಗಳನ್ನು ಮೇಲ್ದರ್ಜೆಗೇರಿಸಿರುವ ಆದೇಶಗಳಿಗೆ ತಡೆಯಾಜ್ಞೆ ಇರುತ್ತದೆ. |
| (ಆ) | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಖಾಯಂ ನೌಕರರ ಸಂಖ್ಯೆಯೆಷ್ಟು; ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆಯೆಷ್ಟು; (ಜಿಲ್ಲಾವಾರು ವಿವರ ಒದಗಿಸುವುದು) | ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ 12,376 ಖಾಯಂ ನೌಕರರು ಹಾಗೂ 404 ಗುತ್ತಿಗೆ ಆಧಾರಿತ ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಜಿಲ್ಲಾವಾರು ಮಾಹಿತಿಯನ್ನು **ಅನುಬಂಧದಲ್ಲಿ** ಒದಗಿಸಿದೆ. |
| (ಇ) | ಸರ್ಕಾರದಿಂದ ಮಂಜೂರಾಗಿರುವ ಹುದ್ದೆಗಳ ಸಂಖ್ಯೆಯೆಷ್ಟು; ಖಾಲಿ ಇರುವ ಹುದ್ದೆಗಳ ಸಂಖ್ಯೆಯೆಷ್ಟು; | ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರದಿಂದ ಒಟ್ಟು 35,970 ಹುದ್ದೆಗಳು ಮಂಜೂರಾಗಿರುತ್ತವೆ. ಇದರಲ್ಲಿ ಒಟ್ಟು 23,594 ಹುದ್ದೆಗಳು ಖಾಲಿ ಇರುತ್ತವೆ. |
| (ಈ) | ಹುದ್ದೆಗಳು ಖಾಲಿ ಇದ್ದಲ್ಲಿ, ಇವುಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು; | ಕರ್ನಾಟಕ ಲೋಕಸೇವಾ ಆಯೋಗದಿಂದ 1,104 ನೇರ ನೇಮಕಾತಿ ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿಯನುಸಾರ 771 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದ್ದು, ಉಳಿದ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿದೆ. 553 ಹುದ್ದೆಗಳ ಅಂತಿಮ ಆಯ್ಕೆ ಪ್ರಕ್ರಿಯೆಯು ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಚಾಲ್ತಿಯಲ್ಲಿದ್ದು, ಆಯೋಗದಿಂದ ಅಂತಿಮ ಆಯ್ಕೆ ಪಟ್ಟಿ ಸ್ವೀಕೃತವಾದ ನಂತರ ದಾಖಲಾತಿ ಪರಿಶೀಲನೆ ಮಾಡಿ, ನೈಜತೆ ಪ್ರಮಾಣ ಪತ್ರವನ್ನಾಧರಿಸಿ ನೇಮಕಾತಿ ಆದೇಶ ನೀಡುವ ಮೂಲಕ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತದೆ. |

| | | |
|---|---|---|
| | | ಮುಂಬಡ್ತಿ ಕೋಟಾದಡಿಯಲ್ಲಿ ಖಾಲಿ ಇರುವ ಗ್ರೂಪ್ "ಬಿ" ಮತ್ತು ಗ್ರೂಪ್ "ಸಿ" ವೃಂದದ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ. ಕೆಲವು ಹುದ್ದೆಗಳ ಸೇವೆಯನ್ನು ಹೊರಗುತ್ತಿಗೆ ಮತ್ತು ನೇರಪಾವತಿಯಡಿ ಪಡೆಯಲು ಅವಕಾಶವಿದ್ದು, ಅದರಂತೆ ಹೊರಗುತ್ತಿಗೆ ಮತ್ತು ನೇರನೇಮಕಾತಿಯಡಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ. |
| (ಉ) | ಸಿಬ್ಬಂದಿಗಳ ಕೊರತೆಯಿಂದ ಸ್ಥಳೀಯ ಸಂಸ್ಥೆಗಳಲ್ಲಿ ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು? | ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ 23,594 ಹುದ್ದೆಗಳು ಖಾಲಿ ಇದ್ದರೂ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ 12,376 ಖಾಯಂ ನೌಕರರು ಹಾಗೂ 14,670 ಗುತ್ತಿಗೆ, ಹೊರಗುತ್ತಿಗೆ, ದಿನಗೂಲಿ/ಕ್ಷೇಮಾಭಿವೃದ್ಧಿ, ನೇರಪಾವತಿ ಮತ್ತಿತರ ನೌಕರರು ಸೇರಿ ಒಟ್ಟು 27,046 ಅಧಿಕಾರಿ/ನೌಕರರಿಂದ ದೈನಂದಿನ ಕಾರ್ಯಗಳಲ್ಲದೇ ಸಾರ್ವಜನಿಕರಿಗೆ ಅನಾನುಕೂಲವಾಗದ ರೀತಿಯಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸಹ ಕ್ರಮಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ನಅಇ 13 ಎಲ್‌ಸಿಕ್ಯೂ 2022

(ಎನ್. ನಾಗರಾಜು ಎಂ ಟಿ ಬಿ)
ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು.

ಅನುಬಂಧ – 1

| ಕ್ರ. ಸಂ. | ಹುದ್ದೆಯ ಹೆಸರು | ಮಂಜೂರಾದ ಹುದ್ದೆಗಳ ಸಂಖ್ಯೆ | ಕಾರ್ಯ ನಿರ್ವಹಿಸುತ್ತಿರುವ ಖಾಯಂ ನೌಕರರ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ | ಕಾರ್ಯ ನಿರ್ವಹಿಸುತ್ತಿರುವ ಗುತ್ತಿಗೆ, ಹೊರಗುತ್ತಿಗೆ, ದಿನಗೂಲಿ/ಕ್ಷೇಮಾಭಿವೃದ್ಧಿ, ನೇರಪಾವತಿ ನೌಕರರ ಸಂಖ್ಯೆ |
|---|---|---|---|---|---|
| 1 | ಪೌರಾಯುಕ್ತರು ದರ್ಜೆ – 1 | 13 | 13 | 0 | 0 |
| 2 | ಪೌರಾಯುಕ್ತರು ದರ್ಜೆ 2 | 47 | 41 | 6 | 0 |
| 3 | ಸಹಾಯಕ ಕಾರ್ಯಪಾಲಕ ಅಭಿಯಂತರರು | 73 | 44 | 29 | 2 |
| 4 | ಸೀನಿಯರ್ ಪ್ರೋಗ್ರಾಮರ್ | 59 | 3 | 56 | 48 |
| 5 | ಸಹಾಯಕ ಅಭಿಯಂತರರು | 76 | 39 | 37 | 5 |
| 6 | ಪರಿಸರ ಅಭಿಯಂತರರು | 175 | 100 | 75 | 4 |
| 7 | ಮುಖ್ಯಾಧಿಕಾರಿ ದರ್ಜೆ– 1 | 114 | 104 | 10 | 1 |
| 8 | ಲೆಕ್ಕ ಅಧೀಕ್ಷಕರು | 61 | 40 | 21 | 0 |
| 9 | ಕಛೇರಿ ವ್ಯವಸ್ಥಾಪಕರು | 205 | 141 | 64 | 2 |
| 10 | ಕಂದಾಯಾಧಿಕಾರಿ | 183 | 128 | 55 | 8 |
| 11 | ಮುಖ್ಯಾಧಿಕಾರಿ ದರ್ಜೆ– 2 | 130 | 105 | 25 | 2 |
| 12 | ಅಕೌಂಟೆಂಟ್ | 180 | 58 | 122 | 164 |
| 13 | ಕಿರಿಯ ಅಭಿಯಂತರರು | 523 | 217 | 306 | 60 |
| 14 | ಹಿರಿಯ ಆರೋಗ್ಯ ನಿರೀಕ್ಷಕರು | 332 | 154 | 178 | 12 |
| 15 | ಪ್ರಥಮ ದರ್ಜೆ ಸಹಾಯಕರು | 545 | 410 | 135 | 6 |
| 16 | ಸಮುದಾಯ ಸಂಘಟನಾ ಅಧಿಕಾರಿ | 325 | 158 | 167 | 11 |
| 17 | ಶೀಘ್ರಲಿಪಿಗಾರರು | 261 | 5 | 256 | 26 |
| 18 | ಜ್ಯೂನಿಯರ್ ಪ್ರೋಗ್ರಾಮರ್ | 130 | 2 | 128 | 174 |
| 19 | ಪ್ರಥಮ ದರ್ಜೆ ಕಂದಾಯ ನಿರೀಕ್ಷಕರು | 377 | 206 | 171 | 16 |
| 20 | ನೀರು ಸರಬರಾಜು ಸಹಾಯಕ | 1035 | 50 | 985 | 254 |
| 21 | ಕಂಪ್ಯೂಟರ್ಆಪರೇಟರ್/ಡಾಟಾಎಂಟ್ರಿ ಆಪರೇಟರ್ | 676 | 12 | 664 | 529 |
| 22 | ಕಿರಿಯ ಆರೋಗ್ಯ ನಿರೀಕ್ಷಕರು | 549 | 237 | 312 | 77 |
| 23 | ಎಲೆಕ್ಟ್ರಿಷಿಯನ್ ದರ್ಜೆ I | 116 | 61 | 55 | 2 |
| 24 | ಸಮುದಾಯ ಸಂಘಟಕರು | 345 | 113 | 232 | 19 |
| 25 | ದ್ವಿತೀಯ ದರ್ಜೆ ಸಹಾಯಕರು | 1280 | 858 | 422 | 80 |
| 26 | ಕರವಸೂಲಿಗಾರರು | 705 | 489 | 216 | 90 |
| 27 | ವಾಹನಚಾಲಕರು | 859 | 88 | 771 | 1653 |
| 28 | ಎಲೆಕ್ಟ್ರಿಷಿಯನ್ ದರ್ಜೆ 2 | 63 | 19 | 44 | 25 |
| 29 | ಸಹಾಯಕ ನೀರು ಸರಬರಾಜು | 1080 | 56 | 1024 | 337 |

| ಕ್ರ. ಸಂ | ಹುದ್ದೆಯ ಹೆಸರು | ಮಂಜೂರಾದ ಹುದ್ದೆಗಳ ಸಂಖ್ಯೆ | ಕಾರ್ಯ ನಿರ್ವಹಿಸುತ್ತಿರುವ ಖಾಯಂ ನೌಕರರ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ | ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ, ಹೊರಗುತ್ತಿಗೆ, ದಿನಗೂಲಿ/ಕ್ಷೇಮಾಭಿವೃದ್ಧಿ, ನೇರಪಾವತಿ ನೌಕರರ ಸಂಖ್ಯೆ |
|---|---|---|---|---|---|
| 30 | ಲ್ಯಾಬ್ ಟೆಕ್ನಿಷಿಯನ್ | 60 | 2 | 58 | 7 |
| 31 | ಪ್ಲಂಬರ್ | 193 | 4 | 189 | 32 |
| 32 | ಸ್ಯಾನಿಟರಿ ಸೂಪರ್‌ವೈಸರ್ | 678 | 215 | 463 | 134 |
| 33 | ಹೆಡ್ ಗಾರ್ಡನರ್ | 68 | 5 | 63 | 3 |
| 34 | ಸೀನಿಯರ್ ವಾಲ್‌ಮನ್ | 489 | 84 | 405 | 82 |
| 35 | ಪೌರಕಾರ್ಮಿಕರು | 16013 | 5803 | 10210 | 6659 |
| 36 | ಅಟೆಂಡರ್ | 1004 | 678 | 326 | 73 |
| 37 | ಲೋಡರ್ | 2560 | 328 | 2232 | 964 |
| 38 | ಕ್ಲೀನರ್ | 530 | 55 | 475 | 222 |
| 39 | ಗಾರ್ಡನರ್ | 394 | 99 | 295 | 57 |
| 40 | ಹೆಲ್ಪರ್/ವಾಟರ್ ಸಪ್ಲೈ ವಾಲ್‌ಮನ್ | 3464 | 1152 | 2312 | 2830 |
| | ಒಟ್ಟು | **35970** | **12376** | **23594** | **14670** |

ಅನುಬಂಧ-

| ಕ್ರ.ಸಂ. | ಜಿಲ್ಲೆಯ ಹೆಸರು | ಗುತ್ತಿಗೆ |
|---|---|---|
| 1 | ಬೆಂಗಳೂರು ನಗರ | 3 |
| 2 | ಬೆಂಗಳೂರು ಗ್ರಾಮಾಂತರ | 5 |
| 3 | ರಾಮನಗರ | 28 |
| 4 | ತುಮಕೂರು | 35 |
| 5 | ಕೋಲಾರ | 8 |
| 6 | ಚಿಕ್ಕಬಳ್ಳಾಪುರ | 6 |
| 7 | ಶಿವಮೊಗ್ಗ | 10 |
| 8 | ಚಿತ್ರದುರ್ಗ | 10 |
| 9 | ದಾವಣಗೆರೆ | 5 |
| 10 | ಮೈಸೂರು | 12 |
| 11 | ಮಂಡ್ಯ | 5 |
| 12 | ಹಾಸನ | 9 |
| 13 | ಕೊಡಗು | 2 |
| 14 | ಚಿಕ್ಕಮಗಳೂರು | 5 |
| 15 | ಚಾಮರಾಜನಗರ | 10 |
| 16 | ಉಡುಪಿ | 3 |
| 17 | ದಕ್ಷಿಣ ಕನ್ನಡ | 11 |
| 18 | ಬೆಳಗಾವಿ | 44 |
| 19 | ಬಾಗಲಕೋಟೆ | 23 |
| 20 | ಉತ್ತರ ಕನ್ನಡ | 14 |
| 21 | ಗದಗ | 15 |
| 22 | ಹಾವೇರಿ | 21 |
| 23 | ವಿಜಯಪುರ | 27 |
| 24 | ಧಾರವಾಡ | 6 |
| 25 | ಕಲಬುರ್ಗಿ | 16 |
| 26 | ಬಳ್ಳಾರಿ | 11 |
| 27 | ವಿಜಯನಗರ | 11 |
| 28 | ಬೀದರ್ | 11 |
| 29 | ರಾಯಚೂರು | 16 |
| 30 | ಯಾದಗಿರಿ | 12 |
| 31 | ಕೊಪ್ಪಳ | 10 |
| | ಒಟ್ಟು | 404 |